ಅದಾಸಂ.83/2019 , ಪಿಡಬ್ಲ್ಯು.1

ದಿಃ 10.12.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

*ಪಾಟೀ ಸವಾಲುಃಃ1 ಮತ್ತು 3 ನೇ ಪ್ರತಿವಾದಿ ಪರ ವಕೀಲರಿಂದಃಶ್ರೀ ಆರ್ ಸಿ ಎಸ್ ರವರಿಂದಃ*

ನಾನು ಖರೀದಿಸಿದ ಸ್ವತ್ತಿನ ಬಡಾವಣೆ ನಕ್ಷೆಯನ್ನು ನ್ಯಾ.ಕ್ಕೆ ಹಾಜರುಪಡಿಸಿದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಖರೀದಿಸಿದ ಸ್ವತ್ತನ್ನು ಸ್ಥಳಕ್ಕೆ ಭೇಟಿ ನೀಡಿ ನೋಡಿ ಖರೀದಿಸಿರುತ್ತೇನೆ. ನಾನಾು ಖರೀದಿಸಿದ ನಿವೇಶನ ಮೂಲತಃ ಯಾವ ಸರ್ವೆ ನಂಬರಿನಲ್ಲಿ ಬರುತ್ತಿದೆ ಎಂದು ಗೊತ್ತಿಲ್ಲ. ನಾನು ಭೂ ಪರಿವರ್ತನೆ ಮಾಡಿದ ಬಗ್ಗೆ ದಾಖಲೆಯನ್ನು ನ್ಯಾಯಕ್ಕೆ ಹಾಜರುಪಡಿಸಿಲ್ಲ. ನಾನು ಖರೀದಿಸಿದ ನಿವೇಶನ ಸರ್ವೆ ನಂಬರಿನಲ್ಲಿ ಸುಮಾರು 127 ಸೈಟುಗಳನ್ನು ಮಾಡಿರುತ್ತಾರೆ. ಅದಕ್ಕೆ ಸಂಬಂಧಪಟ್ಟಂತೆ ದಾಖಲೆಯನ್ನು ನಾನು ಹಾಜರುಪಡಿಸಿಲ್ಲ. ನಾನು ದಾವಾ ಸ್ವತ್ತನ್ನು ಖರೀದಿಸುವ ಸಮಯದಲ್ಲಿ 1 ರಿಂದ 3 ನೇ ಪ್ರತಿವಾದಿಯರ ಗಮನಕ್ಕೆ ತಂದಿದ್ದೆನು. ಪ್ರತಿವಾದಿಯರನ್ನು ಸಾಕ್ಷಿಯಾಗಿ ತೆಗೆದುಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ , ಆದರೆ ಆದಿನಾರಾಯಣರೆಡ್ಡಿ ರವರು ನಾನು ಸಹಿ ಮಾಡುತ್ತಿದ್ದೇನೆ ಮುಂದೆ ಯಾವುದೇ ತೊಂದರೆ ಆಗುವುದಿಲ್ಲ ಎಂದು ಹೇಳಿದ್ದರಿಂದ ಸಹಿ ಪಡೆದಿಲ್ಲ. ನಾನು 3 ಲಕ್ಷ 42 ಸಾವಿರ ಹಣ ಪಡೆದುಕೊಂಡು ನಿಪಿ 1 ರಂತೆ ಕ್ರಯಪತ್ರ ಪಡೆದಿರುತ್ತೇನೆ ಎಂದರೆ ಸರಿ . ನಾನು ದಾಖಲೆಗಳನ್ನು ನೋಡಿಯೇ ದಾವಾ ಸ್ವತ್ತನ್ನು ನಿಪಿ 1 ರಂತೆ ಕ್ರಯಕ್ಕೆ ಪಡೆದಿರುತ್ತೇನೆ ಎಂದರೆ ಸರಿ. ಸದರಿ ಕ್ರಯಪತ್ರದಂತೆ ನನ್ನ ಹೆಸರಿಗೆ ಖಾತಾ ಬದಲಾವಣೆ ಆಗಿದೆ ಎಂದರೆ ಸರಿ .

ಕೆ ಎಸ್ ಆರ್ ಟಿ ಸಿ ರವರಿಂದ ನಮಗೆ ಯಾವುದೇ ನೋಟೀಸು ಬಂದಿಲ್ಲ. ದಿಃ 04.08.2018 ಮತ್ತು 20.08.2018 ರಂದು 4 ಮತ್ತು 5 ನೇ ಪ್ರತಿವಾದಿಯರು ಬರೆದುಕೊಟ್ಟ ನೋಂದಾಯಿತವಲ್ಲದ ಕ್ರಯ ಕರಾರನ್ನು ನ್ಯಾ.ಕ್ಕೆ ಹಾಜರುಪಡಿಸಿಲ್ಲ , ಮುಂದೆ ಹಾಜರುಪಡಿಸುತ್ತೇನೆ .

**(ಈ ಹಂತದಲ್ಲಿ ಮುಂ.ಪಾಟೀ ಸವಾಲಿಗೆ  ಸಮಯಾವಕಾಶ  ನೀಡಲಾಯಿತು.)**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಗಣಕೀಕರಣಗೊಳಿಸಲಾಯಿತು.)

**ಓ ಹೇ ಕೇ ಸ ಇದೆ**

ಸಿಜೆ ಮತ್ತು ಜೆಎಂಎಫ್ ಸಿ. ,

ಬಾಗೇಪಲ್ಲಿ